**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 684/2023**

**ಸಿಡಬ್ಲ್ಯೂ-7 ಪಿಡಬ್ಲ್ಯೂ-7**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗ |
| ತಂದೆಯ ಹೆಸರು | : | ವೆಂಕಟರಂಗ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಅಮ್ಮಾಜಿ ಕಟ್ಟೆ ಗ್ರಾಮ |

**ಸಾಕ್ಷಿಗೆ ದಿನಾಂಕಃ 14.08.2026 ರಂದು ಪ್ರಮಾಣ ಮಾಡಿಸಲಾಯಿತು.**
**ಮುಖ್ಯ ವಿಚಾರಣೆಃ ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಯು ನಿ.ಪಿ..2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ದಿ.15.07.2023 ರಂದು ಅಮ್ಮಾಜಿ ಕಟ್ಟೆಯಲ್ಲಿ ನನ್ನ ಮತ್ತು ಚಾಸಾ.1 ಮತ್ತು 6 ರವರ ಸಮಕ್ಷಮ ಸಂಜೆ 4.30 - 6.30 ರವರೆಗೆ ಮಹಜರ್ ಕ್ರಮವನ್ನು ಜರುಗಿಸಿದ್ದು, ಸದರಿ ಸ್ಥಳದಲ್ಲಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿ.ಪಿ.3,4 ಮತ್ತು 11 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಜಿ.ಆರ್.ಎಸ್. ರವರಿಂದ :**

ಮಹಜರ್ ನ್ನು ಪೋಲಿಸರು ಬರೆದಿರುತ್ತಾರೆ. ಘಟನೆಯ ಬಗ್ಗೆ ನಾನು ಪೋಲಿಸರಿಗೆ ತಿಳಿಸಿರುತ್ತೇನೆ. ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತ ಆದ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಮಹಜರ್ ಗೆ ನಾನು ಮತ್ತು ಚಾಸಾ.6 ರವರು ಸಹಿ ಮಾಡಿರುತ್ತೇವೆ. ಅಪಘಾತ ಆದ ವಿಚಾರ ನನಗೆ ಗೊತ್ತಿಲ್ಲದೆ ಇದ್ದರೂ ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತೇನೆ.)

**ಓ.ಹೇ.ಕೇ.ಸ. ಇದೆ.,**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಲಯ, ತಿ. ನರಸಿಪುರ**